ನಿ-330-(11)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ವೈ.ಎ.ನಾರಾಯಣಸ್ವಾಮಿ ರವರು ನಿಯಮ 330 ರ ಅಡಿಯಲ್ಲಿ ಪ್ರಸ್ತಾಪಿಸಿರುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯಮಂತ್ರಿರವರ ಹೇಳಿಕೆ**

**ವಿಷಯ:** ಬೆಂಗಳೂರು ನಗರದ ಹೆಬ್ಬಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಭೂಪಸಂದ್ರ, ನಾಗಶೆಟ್ಟಿಹಳ್ಳಿ, ಚಿಕ್ಕಮಾರನಹಳ್ಳಿ, ಗೆದ್ದಲಹಳ್ಳಿ ಭಾಗದ ಜಮೀನುಗಳನ್ನು 1980 ನೇ ಸಾಲಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸ್ವಾಧೀನ ಪಡಿಸಿಕೊಂಡಿದ್ದು, ತದನಂತರ ಮೇಲ್ಕಂಡ ಭಾಗದಲ್ಲಿ ನಿಗದಿತ ಸಮಯಕ್ಕೆ ಯಾವುದೇ ಬಡಾವಣೆ ನಿರ್ಮಿಸದೇ ಇದ್ದುದರಿಂದ ಆ ಭಾಗದ ರೈತರು ಬಡಾವಣೆಗಳನ್ನು ಮಾಡಿ ಮಾರಾಟ ಮಾಡಿದ ಪ್ರಯುಕ್ತ ನಾಗರೀಕರು ಮನೆಗಳನ್ನು ನಿರ್ಮಿಸಿಕೊಂಡು ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಂಡು ಸೂಮಾರು 40 ವರ್ಷಗಳಿಂದ ಇಲ್ಲಿ ವಾಸ ಮಾಡುತ್ತಿರುತ್ತಾರೆ ಇಂತಹ ನಾಗರೀಕರಿಗೆ ಇವತ್ತಿಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವತಿಯಿಂದ ಕಿರುಕುಳ ನಿಂತಿಲ್ಲ ಆದ್ದರಿಂದ ಈ ಭಾಗದ ನಾಗರೀಕರಿಗೆ ಸರ್ಕಾರ ಅವರು ವಾಸ ಮಾಡುತ್ತಿರುವ ಜಾಗಗಳನ್ನು ರೀಕನ್ವೆ ಮಾಡಿಕೊಡುವ ವಿಚಾರದ ಕುರಿತು.

******

**ಉತ್ತರ:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರಾಜ ಮಹಲ್ ವಿಲಾಸ್ 2ನೇ ಹಂತದ ಮತ್ತು ಮುಂದುವರೆದ ರಾಜಮಹಲ್ ವಿಲಾಸ್ 2ನೇ ಬಡಾವಣೆಯ ಯೋಜನೆಗಾಗಿ ಮತ್ತಿಕೆರೆ, ಚಿಕ್ಕಮಾರನಹಳ್ಳಿ, ದ್ಯಾವಸಂದ್ರ, ಪೂರ್ಣಪುರ, ಲೊಟ್ಟೆಗೊಲ್ಲಹಳ್ಳಿ, ನಾಗಶೆಟ್ಟಿಹಳ್ಳಿ, ಗೆದ್ದಲಹಳ್ಳಿ, ವೈಯಾಲಿಕಾವಲ್ ಗ್ರಾಮಗಳಲ್ಲಿನ ಒಟ್ಟು 1331–04 ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ದಿನಾಂಕ 02.08.1978 ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಮುಂದುವರೆದು ಭೂಪಸಂದ್ರ ಗ್ರಾಮದಲ್ಲಿನ 108–17 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ದಿನಾಂಕ 28.12.1982 ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಈ ಮೇಲಿನ ಎರಡು ಅಂತಿಮ ಅಧಿಸೂಚನೆಗಳಲ್ಲಿನ ಒಟ್ಟು 1,439–21 ಎಕರೆ ಜಮೀನಿನ ಪೈಕಿ 740–09 ಎಕರೆ ಜಮೀನುಗಳನ್ನು ಸಿ.ಪಿ.ಆರ್.ಐ ಮತ್ತು ಟಾಟ ಇನ್ಸ್‌ಟಿಟ್ಯೂಟ್ ರವರಿಗೆ ನೀಡಿರುವುದರಿಂದ ಹಾಗೂ ಕೆಲವು ಜಮೀನುಗಳಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳು ಮತ್ತು ಅಸಲು ದಾವೆಗಳಲ್ಲಿ ಖಾಯಂ ತಡೆಯಾಜ್ಞೆ ಇರುವುದರಿಂದ ಪ್ರಾಧಿಕಾರದಿಂದ ಐತೀರ್ಪು ರಚಿಸಲು ಸಾಧ್ಯವಾಗಿರುವುದಿಲ್ಲ ಹಾಗೂ ಜಮೀನಿನ ಸುಪರ್ದನ್ನು ಪಡೆಯಲು ಸಹ ಸಾಧ್ಯವಾಗಿರುವುದಿಲ್ಲ.

--

ಅಂತಿಮ ಅಧಿಸೂಚನೆಗಳಲ್ಲಿ ಹೊರಡಿಸಿರುವ ಒಟ್ಟು 1,439-21 ಎಕರೆ ವಿಸ್ತೀರ್ಣದ ಪೈಕಿ ಐತೀರ್ಪು ರಚಿಸಿ ಪ್ರಾಧಿಕಾರದ ಸುಪರ್ದಿಗೆ ಪಡೆದಿರುವ ವಿಸ್ತೀರ್ಣದ ವಿವರಗಳು ಈ ಕೆಳಕಂಡಂತಿದೆ.

| ಕ್ರ.ಸಂ | ಬಡಾವಣೆಯ ಹೆಸರು | ಐತೀರ್ಪು ರಚಿಸಿರುವ ವಿಸ್ತೀರ್ಣ ಎ - ಗು | ಕಲಂ 16(2) ರಂತೆ ಸುರ್ಪದಿಗೆ ಪಡೆದ ವಿಸ್ತೀರ್ಣ ಎ - ಗು |
|---|---|---|---|
| 1 | ಆರ್.ಎಂ.ವಿ 2 ನೇ ಹಂತದ ಬಡಾವಣೆ | 629 - 24 | 629 - 24 |
| 2 | ಮುಂದುವರೆದ ಆರ್.ಎಂ.ವಿ 2 ನೇ ಹಂತದ ಬಡಾವಣೆ | 69 - 28 | 69 - 28 |
| | ಒಟ್ಟು | 699 - 12 | 699 - 12 |

ಭೂಸ್ವಾಧೀನದಿಂದ ಕೈಬಿಡಲಾಗಿರುವ ಜಮೀನಿನ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ಬಡಾವಣೆಯ ಹೆಸರು | ಕಲಂ 48(1) ರಂತೆ ಭೂಸ್ವಾಧೀನದಿಂದ ಕೈಬಿಟ್ಟಿರುವ ವಿಸ್ತೀರ್ಣ ಎ - ಗು | ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಭೂಸ್ವಾಧೀನದಿಂದ ರದ್ದುಪಡಿಸಿರುವ ವಿಸ್ತೀರ್ಣ ಎ - ಗು |
|---|---|---|---|
| 1 | ಆರ್.ಎಂ.ವಿ 2 ನೇ ಹಂತದ ಬಡಾವಣೆ | 104 - 35 | 20-00 |
| 2 | ಮುಂದುವರೆದ ಆರ್.ಎಂ.ವಿ 2 ನೇ ಹಂತದ ಬಡಾವಣೆ | 6 - 36.08 | 13 - 05 |
| | ಒಟ್ಟು | 111 - 31 | 33 - 05 |

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 1976ರ ಕಲಂ 38(ಸಿ) ತಿದ್ದುಪಡಿಗೊಳಿಸಿ ಕಲಂ 38(ಡಿ) ಸೇರ್ಪಡೆಗೊಳಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅದರಂತೆ ಪ್ರಾಧಿಕಾರದಿಂದ ಭೂಸ್ವಾಧೀನಕ್ಕೊಳಪಟ್ಟ ಜಮೀನಿನಲ್ಲಿನ ಅನಧಿಕೃತ ಕಟ್ಟಡಗಳಿರುವ ನಿವೇಶನಗಳನ್ನು ಮರುಮಂಜೂರಾತಿ ವ್ಯಾಪ್ತಿಯಲ್ಲಿ ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಸದರಿ ತಿದ್ದುಪಡಿಯಂತೆ ಒಳಪಡುವ ಪ್ರಕರಣಗಳ ವಿವರಗಳು ಈ ಕೆಳಕಂಡಂತಿದೆ:-

ಅ) ಮರು ಮಂಜೂರಾತಿದಾರರು ಅಧಿಸೂಚನೆ ಹೊರಡಿಸಿರುವ ದಿನಾಂಕದ 12 ವರ್ಷಗಳಿಗೆ ಮುಂಚಿತವಾಗಿ ಕಟ್ಟಡ ನಿರ್ಮಾಣ ಮಾಡಿರತಕ್ಕದ್ದು,

ಆ) ಮರು ಮಂಜೂರಾತಿದಾರರು ಆಯಾ ಕಾಲಕ್ಕೆ ತಕ್ಕಂತೆ ಕಂದಾಯ ಇಲಾಖೆ, ಕರ್ನಾಟಕ ಸರ್ಕಾರವು ವಿಧಿಸಬಹುದಾದ ಮಾರ್ಗಸೂಚಿ ದರದ ಮೌಲ್ಯ / ದಂಡವನ್ನು ಈ ಕೆಳಕಂಡಂತೆ ಪಾವತಿಸಿಕೊಳ್ಳಬೇಕಾಗಿರುತ್ತದೆ.

| ಕ್ರಮ ಸಂಖ್ಯೆ | ಮೂಲೆ ನಿವೇಶನ ಹೊರತು ಪಡಿಸಿ ಕಟ್ಟಡದ ಅಳತೆ | ಪಾವತಿಸಿಕೊಳ್ಳಬೇಕಾದ ದಂಡ / ಮೌಲ್ಯ |
|---|---|---|
| 1 | 20 x 30 ಅಡಿ ಅಳತೆಯವರೆಗೆ | ಮಾರ್ಗಸೂಚಿ ದರದ ಶೇ 10% ರಷ್ಟು |
| 2 | 20 x 30 ಅಡಿ ಅಳತೆಯ ಮೇಲೆ 30 x 40 ಅಡಿ ಅಳತೆಯವರೆಗೆ | ಮಾರ್ಗಸೂಚಿ ದರದ ಶೇ 25% ರಷ್ಟು |
| 3 | 30 x 40 ಅಡಿ ಅಳತೆಯ ಮೇಲೆ 40 x 60 ಅಡಿ ಅಳತೆಯವರೆಗೆ | ಮಾರ್ಗಸೂಚಿ ದರದ ಶೇ 40% ರಷ್ಟು |
| 4 | 40 x 60 ಅಡಿ ಅಳತೆಯ ಮೇಲೆ 50 x 80 ಅಡಿ ಅಳತೆಯವರೆಗೆ | ಮಾರ್ಗಸೂಚಿ ದರದ ಶೇ 50% ರಷ್ಟು ಹಾಗೂ ಶೇ 5% ರಷ್ಟು ನಿಗಧಿತ ದಂಡ |

- ಮೂಲೆ ನಿವೇಶನಗಳಲ್ಲಿನ ಕಟ್ಟಡಗಳಾಗಿದ್ದಲ್ಲಿ ಮೇಲ್ಕಂಡ ಮಾರ್ಗಸೂಚಿ ದರದ ಎರಡುಪಟ್ಟು ದಂಡ / ಮೌಲ್ಯ ಪಾವತಿಸಿಕೊಳ್ಳಬೇಕಾಗಿರುತ್ತದೆ.

ಇ) 50 x 80ಅಡಿ ಅಳತೆ ಅಂದರೆ ಗರಿಷ್ಠ 4000 ಚದರ ಅಡಿಗಳಿಗೆ ಮೀರದಂತೆ ಕಂದಾಯ ನಿವೇಶನಗಳಲ್ಲಿನ ಅನಧಿಕೃತ ಕಟ್ಟಡಗಳಿರುವ ನಿವೇಶನಗಳನ್ನು ಮಾತ್ರ ಮರುಮಂಜೂರಾತಿಗೆ ಅಳವಡಿಸಲು ಅವಕಾಶವಿರುತ್ತದೆ.

ಈ) ಪ್ರಾಧಿಕಾರದ ಅಂತಿಮ ಅಧಿಸೂಚನೆಗೆ ಒಳಪಟ್ಟು, ಐತೀರ್ಪು ಅನುಮೋದನೆಗೊಂಡ, ಜಮೀನಿನಲ್ಲಿನ ಅನಧಿಕೃತ ಕಟ್ಟಡಗಳಿರುವ ನಿವೇಶನಗಳನ್ನು ಮಾತ್ರ ಮರುಮಂಜೂರಾತಿಗೆ ಪರಿಗಣಿಸಬಹುದು.

ಉ) ಭೂಸ್ವಾಧೀನ ವರದಿಯಂತೆ ಭೂಪಸಂದ್ರ, ನಾಗಶೆಟ್ಟಿಹಳ್ಳಿ, ಚಿಕ್ಕಮಾರಹನಹಳ್ಳಿ, ಗೆದ್ದಲಹಳ್ಳಿ ಈ ಗ್ರಾಮಗಳ ಸರ್ವೆ ನಂಬರ್ ನ ಜಮೀನುಗಳು ಅಂತಿಮ ಅಧಿಸೂಚನೆಯಲ್ಲಿ ಒಳಗೊಂಡಿರುತ್ತದೆ.

ಊ) ಅಂತಿಮ ಅಧಿಸೂಚನೆಯಲ್ಲಿ ಒಳಗೊಂಡ ಕೆಲವು ಸರ್ವೆ ನಂಬರ್ ಗಳ ಜಮೀನುಗಳು ತಕರಾರಿನಿಂದ ಕೂಡಿರುವುದರಿಂದ ಐ-ತೀರ್ಪು ರಚಿಸಲು ಸಾಧ್ಯವಾಗಿರುವುದಿಲ್ಲ ಹಾಗೂ ಜಮೀನನ್ನು ಸುಪರ್ಧಿಗೆ ಪಡೆಯಲು ಸಾಧ್ಯವಾಗಿರುವುದಿಲ್ಲ.

ಖ) ಸದರಿ ತಿದ್ದುಪಡಿಯಂತೆ ಐ-ತೀರ್ಪು ಅನುಮೋದನೆಗೊಂಡು, ಸ್ವಾಧೀನ ಪಡೆದ ಜಮೀನಿನಲ್ಲಿ ಇರಬಹುದಾದ ಅನಧಿಕೃತ ಕಟ್ಟಡಗಳನ್ನು ಮರುಮಂಜೂರಾತಿ ಅಡಿಯಲ್ಲಿ ಸಕ್ರಮಗೊಳಿಸಲು ಅವಕಾಶವಿರುತ್ತದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1976, ಕಲಂ 38(ಸಿ) ಗೆ ಮೂಲಕ ಕಲಂ 38 (ಡಿ) ಯನ್ನು ಸೇರ್ಪಡೆ ಮಾಡಿರುವುದರಿಂದ ಪ್ರಾಧಿಕಾರದಿಂದ ನಿರ್ಮಾಣಗೊಂಡ ಬಡಾವಣೆಗಳನ್ನು ದಿನಾಂಕ: 28.05.2020 ಕ್ಕೆ 12 ವರ್ಷಗಳ ಹಿಂದೆಯೇ ನಿರ್ಮಾಣಗೊಂಡ ಅನಧಿಕೃತ ಕಟ್ಟಡಗಳನ್ನು ಮರುಮಂಜೂರಾತಿಯಡಿಯಲ್ಲಿ ಸಕ್ರಮಗೊಳಿಸಲು ಅವಕಾಶವಿರುತ್ತದೆ.

ಅದರಂತೆ ಭೂಪಸಂದ್ರ, ನಾಗಶೆಟ್ಟಹಳ್ಳಿ, ಚಿಕ್ಕಮಾರನಹಳ್ಳಿ, ಗೆದ್ದಲಹಳ್ಳಿ ಗ್ರಾಮಗಳ ಸರ್ವೆ ನಂಬರ್ ಗಳ ಜಮೀನುಗಳು ಪ್ರಾಧಿಕಾರದಿಂದ ಅಂತಿಮ ಅಧಿಸೂಚಿತ ಒಳಪಟ್ಟು ಐ-ತೀರ್ಪು ಅನುಮೋದನೆಗೊಂಡು ಭೂಸ್ವಾಧೀನ ಪಡೆದ ಜಮೀನಿನಲ್ಲಿ ಇರಬಹುದಾದ 12 ವರ್ಷದ ಹಿಂದೆ ಕಟ್ಟಿರುವ ಅನಧಿಕೃತ ಕಟ್ಟಡಗಳಿಗೆ ಸದರಿ 38(ಡಿ) ತಿದ್ದುಪಡಿಯನ್ವಯ ಮರುಮಂಜೂರಾತಿ ಅಡಿಯಲ್ಲಿ ಸಕ್ರಮಗೊಳಿಸಲು ಅವಕಾಶವಿರುತ್ತದೆ.

---

**ಸಂಖ್ಯೆ: ನಅಇ 14 ಬೆಂಭೂಸ್ವಾ 2021**

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ